

# ಶೆರಪೋವ ನಿರ್ಗಮನ

ಸ್ಟೆಫಿ ಗ್ರಾಫ್ ಎನ್ನುವ ಸುರಸುಂದರಿಯ ನಿರ್ಗಮನದ ಬಳಿಕ ಭಣಗುಡುತ್ತಿದ್ದ ಟೆನಿಸ್ ಕೋರ್ಟ್‌ನಲ್ಲಿ ತನ್ನ ಸೌಂದರ್ಯ ಮತ್ತು ಪ್ರತಿಭೆಯಿಂದ ಸುದ್ದಿ ಮಾಡಿದಾಕೆ ಮರಿಯಾ ಶೆರಪೋವ. ಈಗ ಆಕೆಯ ನಿರ್ಗಮನದ ಸುದ್ದಿಯೂ ಬಂದಿದೆ. ಟೆನಿಸ್ ಲೋಕದಲ್ಲಿ ದೈತ್ಯ ಸಾಧನೆಗಳನ್ನು ಮಾಡಿರುವ ಶೆರಪೋವ, 32ರ ಹರೆಯದಲ್ಲಿ ಕೊನೆಗೂ ಶೂ ಕಳಚಿಡಲು ನಿರ್ಧರಿಸಿರುವುದು ಆಕೆಯ ದೃಢ ವ್ಯಕ್ತಿತ್ವಕ್ಕೆ ತಕ್ಕಂತೆಯೇ ಇದೆ. 6ಅಡಿ 2 ಇಂಚು ಎತ್ತರದ ಈ ನೀಳಕಾಲುಗಳ ಚೆಲುವೆ, ಸುಮಾರು ಎರಡು ದಶಕಗಳ ಕಾಲ ವಿಶ್ವದಾದ್ಯಂತ ಟೆನಿಸ್‌ಪ್ರಿಯರನ್ನು ರಂಜಿಸಿದ್ದರು.

2001ರಲ್ಲಿ ವೃತ್ತಿಪರ ಟೆನಿಸ್‌ಗೆ ಕಾಲಿಟ್ಟಾಕೆ ಶೆರಪೋವ. ಸುದೀರ್ಘ ವೃತ್ತಿಜೀವನದಲ್ಲಿ ನೂರಾರು ಪ್ರಶಸ್ತಿಗಳು ಹೆಗಲಿಗೇರಿವೆ. ಒಟ್ಟು ಐದು ಗ್ರ್ಯಾನ್‌ಸ್ಲಾಮ್‌ಗಳು ಈಕೆಯ ಖ್ಯಾತಿಯನ್ನು ಮುಗಿಲಿಗೇರಿಸಿವೆ. 2004ರಲ್ಲಿ ವಿಂಬಲ್ಡನ್ ಪ್ರಶಸ್ತಿ ಗೆಲ್ಲುವುದರೊಂದಿಗೆ ಶೃಂಗದ ಸಾಧನೆ ಶುರುವಾಯಿತು. 2005ರಲ್ಲಿ ವಿಶ್ವದ 'ನಂಬರ್ ಒನ್' ಸೀಡ್ ಗಳಿಸಿದ ಶೆರಪೋವ, ಮರುವರ್ಷ ಯುಎಸ್ ಓಪನ್ ಪ್ರಶಸ್ತಿ ಗೆದ್ದುಕೊಂಡು ಟೆನಿಸ್‌ಪ್ರಿಯರ ಕಣ್ಮಣಿಯಾದಳು. 2008ರಲ್ಲಿ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಗೆದ್ದು ಸಾಧನೆಯ ಸ್ಥಿರತೆಯನ್ನು ಮೆರೆದಳು. ಆದರೆ ಭುಜದ ನೋವು ಪದೇಪದೇ ವಿಜಯದ ಓಟಕ್ಕೆ ತಡೆಯೊಡ್ಡಿತು. ಭುಜದ ನೋವಿನಿಂದ ಆಟ ಕೈಬಿಟ್ಟದ್ದೂ ಉಂಟು. ಶಸ್ತ್ರಚಿಕಿತ್ಸೆಯ ಬಳಿಕ ಮರಳಿ ಫಾರ್ಮ್ ಕಂಡುಕೊಳ್ಳಲು ಎರಡು ವರ್ಷಗಳೇ ಹಿಡಿದವು. ಆದರೆ ಶೆರಪೋವ ಛಲಗಾತಿ. 2012 ಮತ್ತು 14ರಲ್ಲಿ ಎರಡು ಬಾರಿ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದು ಗ್ರ್ಯಾನ್‌ಪ್ರಿ ಸಂಖ್ಯೆಯನ್ನು ಐದಕ್ಕೆ ಏರಿಸಿಕೊಂಡದ್ದು ಸಾಹಸವೇ.

ಈಕೆಯ ಮುಂಗೈ – ಹಿಂಗೈಯ ವಾರೆಹೊಡೆತಗಳು ಮತ್ತು ಬೇಸ್‌ಲೈನ್‌ನ ಶಕ್ತಿಶಾಲಿ ಹೊಡೆತಗಳು ತುಂಬ ಹೆಸರುವಾಸಿ. ವೃತ್ತಿಜೀವನಕ್ಕೆ ಕಾಲಿಟ್ಟ ಆರಂಭದಲ್ಲಿ ಅತ್ಯಂತ ವೇಗದ ಸರ್ವ್‌ಗಳನ್ನು ಹಿಂತಿರುಗಿಸಲು ಎದುರಾಳಿಗಳು ಪರದಾಡುತ್ತಿದ್ದರು. ಆದರೆ ಭುಜದ ನೋವಿನ ಸಮಸ್ಯೆಯ ಬಳಿಕ ಸರ್ವ್ ವೇಗ ಕಡಿಮೆಯಾಯಿತು. ಡಬಲ್‌ಫಾಲ್ಟ್‌ಗಳ ಸಂಖ್ಯೆ ಹೆಚ್ಚಾಯಿತು. 2010ರ ವೇಳೆಗೆ ಫಾರ್ಮ್ ಉತ್ತುಂಗದಲ್ಲಿರುವಾಗ ಈಕೆ ಗಂಟೆಗೆ 101 ಮೈಲಿ ವೇಗದ ಸರ್ವ್ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು.

ಟೆನಿಸ್ ಕೋರ್ಟ್‌ನಲ್ಲಿ ಆಟಗಾರ್ತಿಯರು ಸರ್ವ್ ಜೊತೆಗೇ ಗಟ್ಟಿಯಾಗಿ ಕೂಗು ಹಾಕುವುದು ಸಹಜಕ್ರಿಯೆ. ಶೆರಪೋವ ಕೂಗು ಎಷ್ಟೊಂದು ಗಟ್ಟಿಯೆಂದರೆ ಒಂದೊಮ್ಮೆ ಅದು 101 ಡೆಸಿಬಲ್ ದಾಟಿ ದಾಖಲೆ ನಿರ್ಮಿಸಿತ್ತು. ವಿರೋಧಿ ಆಟಗಾರ್ತಿಯೊಬ್ಬರು ಈ ಕೂಗಿಗೆ ಬೆದರಿ ಅಂಪೈರ್‌ಗೆ ದೂರು ನೀಡಿದ್ದೂ ಉಂಟು!

ವಿಶ್ವ ಟೆನಿಸ್ ರಂಗ ಕಂಡ ಕೆಲವೇ ಕೆಲವು 'ಸುದೀರ್ಘ ಅವಧಿಯ ಆಟಗಾರ್ತಿ'ಯರಲ್ಲಿ ಶೆರಪೋವ ಕೂಡಾ ಒಬ್ಬಾಕೆ. 19 ಸುದೀರ್ಘ ವರ್ಷಗಳ ಕಾಲ ಅಂತರರಾಷ್ಟ್ರೀಯ ವೃತ್ತಿಪರ ಟೆನಿಸ್ ಆಡುವುದೆಂದರೆ ಸುಲಭದ ಮಾತಲ್ಲ. ಅದರಲ್ಲೂ ಮತ್ತೆ ಮತ್ತೆ ಭುಜದ ಗಾಯ ಮರುಕಳಿಸಿ, ಅದಕ್ಕಾಗಿ ಶಸ್ತ್ರಚಿಕಿತ್ಸೆ ಮಾಡಿಕೊಂಡದ್ದುಂಟು. ಶಸ್ತ್ರಚಿಕಿತ್ಸೆಯ ಬಳಿಕ ಅಗ್ರ 100 ಸೀಡ್‌ನಿಂದ ಹೊರಬಿದ್ದರೂ ಛಲಬಿಡದೆ ಆಟವಾಡುತ್ತಾ ಮತ್ತೆ ವಿಶ್ವದ 'ನಂಬರ್ ಒನ್' ಸೀಡ್ ಗಳಿಸಿರುವುದು ಶೆರಪೋವ ಸಾಧನೆಯ ಕಳಶವೇ ಸರಿ. ಇತ್ತೀಚೆಗಷ್ಟೇ ಶೆರಪೋವ ಜೀವಮಾನದ 800ನೇ ಸಿಂಗಲ್ಸ್ ಪಂದ್ಯದ ಗಡಿ ದಾಟಿದ್ದು ಸುದ್ದಿಯಾಗಿತ್ತು. ಟೆನಿಸ್‌ನಲ್ಲಿ ಮಹಿಳೆಯರು 32ರ ಗಡಿ ದಾಟಿ ನಿಲ್ಲುವುದು ಕಷ್ಟ. (ಒಬ್ಬ ಮಾರ್ಟಿನಾ ಮಾತ್ರ ವಯಸ್ಸಿನ ಸವಾಲು ಗೆದ್ದು ಗಟ್ಟಿಯಾಗಿ ಉಳಿದುಕೊಂಡದ್ದುಂಟು.) ಗಾಯಗೊಳ್ಳುತ್ತಾ, ಚಿಕಿತ್ಸೆ–ವಿಶ್ರಾಂತಿ ಪಡೆಯುತ್ತಾ, ಮತ್ತೆ ಮರಳಿ ಕೋರ್ಟಿಗಿಳಿದು ಪ್ರಶಸ್ತಿಗಳನ್ನು ಗೆದ್ದುಕೊಂಡ ಶೆರಪೋವ ಕಥೆ ಎಳೆಯರಿಗೆ ಸ್ಫೂರ್ತಿದಾಯಕವೇ ಸರಿ.

ಟೆನಿಸ್‌ನಿಂದಲೇ ಜೀವನ ಕಟ್ಟಿಕೊಂಡ ಶೆರಪೋವ ವಿಶ್ವದ ಶ್ರೀಮಂತ ಕ್ರೀಡಾಳುಗಳ ಅಗ್ರ ಹತ್ತರ ಪಟ್ಟಿಯಲ್ಲಿ ಸ್ಥಾನ ಪಡೆದದ್ದಿದೆ. ಟೆನಿಸ್‌ನಿಂದಲೇ ಒಟ್ಟು 3.8 ಕೋಟಿ ಡಾಲರ್ ಬಹುಮಾನ ಗಳಿಸಿರುವ ಈಕೆ ಬಹುಮಾನದ ಅಗ್ರ ಮೂರರ ಪಟ್ಟಿಯಲ್ಲಿ ದಾಖಲಾಗಿದ್ದಾಳೆ.

ನಿವೃತ್ತಿಯ ಬಳಿಕ ಶೆರಪೋವ ಇನ್ನಷ್ಟು ಬ್ಯುಸಿ ಇರುವುದಂತೂ ಖಂಡಿತ. ಜನಪ್ರಿಯ ಟಿವಿ ರಿಯಾಲಿಟಿ ಷೋಗಳಲ್ಲಿ ಈಕೆ ನಟಿಸುತ್ತಾಳೆಂದು ಹರಡಿರುವ ಸುದ್ದಿಯನ್ನು ತಳ್ಳಿಹಾಕಲಾಗದು. ಈ ಕುರಿತು ಶರಪೋವ ತನ್ನ ಕಾಲಂನಲ್ಲಿ ಸಣ್ಣ ಸೂಚನೆ ಕೊಟ್ಟಿದ್ದಾಳೆ. 'ನಿವೃತ್ತಿಯ ಬಳಿಕ ಬಿಡುವಿನ ಸಮಯದಲ್ಲಿ ಡ್ಯಾನ್ಸ್ ತರಗತಿಗೆ ಸೇರಿಕೊಳ್ಳಬೇಕು, ಕುಟುಂಬದ ಜೊತೆಗೆ ಹೆಚ್ಚು ಸಮಯ ಕಳೆಯಬೇಕು' ಎಂದು ಆಕೆ ಬರೆದುಕೊಂಡಿದ್ದಾರೆ. ಟಿ.ವಿ. ಷೋಗಳಲ್ಲಿ ಬಂದ ಬಳಿಕ ಈಕೆಯ ಅಭಿಮಾನಿಗಳ ಸಂಖ್ಯೆ ದುಪ್ಪಟ್ಟಾಗುವುದು ಖಂಡಿತ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65